**ದಿಃ**28-07-2026 **ರ ಮಧ್ಯಂತರ ಅರ್ಜಿಯ ಆದೇಶದನ್ವಯ ಸಾಕ್ಷಿಯನ್ನು ದಿಃ** *28/08/2026* **ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ಶ್ರೀ ಐಎಂಎಸ್ ವಕೀಲರಿಂದ ಫಿರ್ಯಾದಿದಾರರ ಪರವಾಗಿ.**

ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ ಆದರೆ ಆಂಗ್ಲ ಭಾಷೆ ಬರುವುದಿಲ್ಲ. 2014-15 ನೇ ಇಸ್ವಿಯಲ್ಲಿ ನಾನು ಹೋಟೇಲ ನಡೆಸುತ್ತಿದ್ದೆ ಎಂದು ತೋರಿಸಲು ದಾಖಲೆ ನನ್ನ ಬಳಿ ಇದೆ ಆದರೆ ಹಾಜರುಪಡಿಸಿಲ್ಲ. ಫಿರ್ಯಾದಿದಾರರ ತಮ್ಮ ಸೈಫಅಲಿ ಬಾಂಬೆವಾಲೆ ನನ್ನ ಹೋಟೇಲನಲ್ಲಿ ಕೆಲಸ ಮಾಡುತ್ತಿದ್ದ ಎಂದು ತೋರಿಸುವ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ನನ್ನಲ್ಲಿ ದಾಖಲೆ ಇದೆ ಎಂದು ಹೇಳುತ್ತಾರೆ.

ಒಂದು ಹೋಟೇಲ ಅಥವಾ ಒಂದು ವ್ಯವಹಾರ/ವ್ಯಾಪಾರ ಸಂಸ್ಥೆ ನಡೆಸಬೇಕಾದಲ್ಲಿ ಅದರ ಕುರಿತು ಪರವಾನಿಗೆ ಮತ್ತು ಟಿನ್ ನಂಬರ ಕೊಡಲಾಗುತ್ತದೆ ಎಂದರೆ ಸರಿ. ನನ್ನ ಹೆಸರಿನಲ್ಲಿ ಪರವಾನಿಗೆ ಮತ್ತು ಟಿನ್ ನಂಬರ ಇಲ್ಲ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಬ್ಯಾಂಕ ವ್ಯವಹಾರ ಮಾಡುತ್ತಿದಲ್ಲಿ ತನ್ನ ಖಾತೆಗೆ ಸಂಬಂಧಪಟ್ಟ ಪಾಸಪುಸ್ತಕ ಮತ್ತು ಚೆಕ್ಕ ಪುಸ್ತಕ ಮನೆಯಲ್ಲಿ ಇಟ್ಟಿರುತ್ತಾರೆ ಎಂದರೆ ಸಾಕ್ಷಿಯು ಉತ್ತರಿಸಿರುವುದಿಲ್ಲ. ಸಾಕ್ಷಿಯು ಸೈಫ ಇವರನ್ನು ನನ್ನ ಹೋಟೇಲನ ಮ್ಯಾನೇಜರ ಎಂದು ಮಾಡಿ ಕೂರಿಸಿದ್ದೆ ಎಂದು ಹೇಳುತ್ತಾರೆ. ಯಾವ ಪ್ರಕರಣದಲ್ಲಿ ನನ್ನ ವಾಹನ ಜಪ್ತಿಯಾಯಿತು ಎಂದು ನನಗೆ ಹೇಳಲು ಆಗುವುದಿಲ್ಲ. ಹುಬ್ಬಳ್ಳಿಯ ಬೆಂಡಿಗೇರಿ ಪೊಲೀಸಠಾಣೆಗೆ ನಾನು ಜಪ್ತಿಯಾದ ವಾಹನದಲ್ಲಿ ನನ್ನ ಬ್ಯಾಂಕ ಖಾತೆಗೆ ಸೇರಿದ ಪಾಸಪುಸ್ತಕ ಮತ್ತು ಚೆಕ್‌ಬುಕ್ ಇತ್ತು ಎಂದು ಹೇಳಿಕೆ ಕೊಟ್ಟಿದ್ದೇನೆ. ಪೊಲೀಸರಿಗೆ ಕೊಟ್ಟ ಹೇಳಿಕೆಯ ಪ್ರತಿಯ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿದ್ದೇನೆ. ನಾನ ಹೇಳಿದಂತೆ ನನಗೆ ಸೇರಿದ ಯಾವುದೇ ವಾಹನವನ್ನು ಪೊಲೀಸರು ಜಪ್ತಿ ಮಾಡಿರಲಿಲ್ಲ ಮತ್ತು ಸದರಿ ವಾಹನದಲ್ಲಿ ನನ್ನ ಬ್ಯಾಂಕ ಖಾತೆಗೆ ಸೇರಿದ ಪಾಸಪುಸ್ತಕ ಮತ್ತು ಚೆಕ್‌ಬುಕ್ ಇಟ್ಟಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ಮನೆ ಹುಬ್ಬಳ್ಳಿಯ ಮಂಟೂರ 3 ನೇ ಕ್ರಾಸನಲ್ಲಿದ್ದೆ ಎಂದರೆ ಸರಿ. ಸಾಕ್ಷಿಯು ಅದೇ ಕ್ರಾಸನ ಶೀಲಾ ಕಾಲೋನಿಯಲ್ಲಿದ್ದೆ ಎಂದು ಹೇಳುತ್ತಾರೆ. ಫಿರ್ಯಾದಿಯು ದೂರನಲ್ಲಿ ಕಾಣಿಸಿರುವ ವಿಳಾಸಕ್ಕೆ ನನಗೆ ನೋಟೀಸು ಕಳುಹಿಸಿದ್ದು, ಅದನ್ನು ಸ್ವೀಕರಿಸಿದ್ದೇನೆ ಎಂದರೆ ಸರಿ. ನೋಟೀಸು ಜಾರಿಯಾದ ನಂತರ ಫಿರ್ಯಾದಿಯ ವಿರುದ್ದ ತನ್ನ ವಾಹನದಲ್ಲಿದ್ದ ಚೆಕ್ಕ ತೆಗೆದುಕೊಂಡು ದುರುಪಯೋಗಪಡಿಸಿಕೊಂಡಿದ್ದಾನೆ ಎಂದು ದೂರು ಕೊಟ್ಟಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದರ ಮೊದಲೇ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ.

ನಿ.ಪಿ.1 ನನ್ನ ಖಾತೆಗೆ ಸಂಬಂಧಪಟ್ಟ ಚೆಕ್ ಎಂದರೆ ಸರಿ. ನಿ.ಪಿ.1(ಎ) ಎಂದು ಗುರುತಿಸಿರುವ ಸಹಿ ನಿಮ್ಮದ್ದು ಎಂರದೆ ಸಾಕ್ಷಿದಾರರು ನಿರಾಕರಿಸುತ್ತಾರೆ. ಫಿರ್ಯಾದಿ ಕೊಟ್ಟ ನೋಟೀಸಿಗೆ ನಾನು ಉತ್ತರ ಕೊಟ್ಟಿದ್ದೇನೆ. ನಾನು ಹೇಳಿದಂತೆ ಫಿರ್ಯಾದಿ ಕೊಟ್ಟ ನೋಟೀಸಿಗೆ ಉತ್ತರ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನನ್ನ ವಿರುದ್ದ ವಂಚನೆ ಮಾಡಿದ ಎರಡು ಕೇಸುಗಳನ್ನು ಪೊಲೀಸರು ದಾಖಲು ಮಾಡಿದ್ದಾರೆ ಎಂದರೆ ಸರಿ. ಎಸ್.ಸಿ.ನಂ.172/2019 ರಲ್ಲಿ ಧಾರವಾಡದ ಮಾನ್ಯ 4 ನೇ ಹೆಚ್ಚುವರಿ ಸತ್ರ ನ್ಯಾಯಾಲಯದಿಂದ ನನಗೆ ಶಿಕ್ಷೆ ಆಗಿದೆ ಎಂದರೆ ಸರಿ. ನಾನು ಬ್ಯಾಂಕಗೆ ಹೋಗಿ ನನ್ನ ಖಾತೆಗೆ ಸೇರಿದ ಚೆಕ್ಕುಗಳು ದುರ್ಬಳಕೆ ಆಗುವ ಸಾಧ್ಯತೆ ಇದೆ, ನನ್ನ ಖಾತೆಯಲ್ಲಿ ಆಗುವ ವ್ಯವಹಾರಗಳನ್ನು ನಿಲ್ಲಿಸಿ ಎಂದು ನಾನು ಅರ್ಜಿ ಕೊಟ್ಟಿಲ್ಲ, ಅದರೆ ಬ್ಯಾಂಕಿನವರೇ ವ್ಯವಹಾರಗಳನ್ನು ಬಂದ ಮಾಡಿದ್ದಾರೆ ಅಥವಾ ನಿಲ್ಲಿಸಿದ್ದಾರೆ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಬ್ಯಾಂಕಿನವರು ತಮ್ಮ ಗ್ರಾಹಕರು ಅರ್ಜಿ ನೀಡದ ಹೊರತು ಅವರ ಖಾತೆಯ ವ್ಯವಹಾರಗಳನ್ನು ಬಂದ ಮಾಡುವುದು ಮಾಡುವುದಿಲ್ಲ ಎಂದರೆ ಸರಿ. ಸಾಕ್ಷಿಯು ವ್ಯವಹಾರ ನಿಲ್ಲಿಸಲು ನಾನು ಅರ್ಜಿ ಕೊಟ್ಟಿಲ್ಲ ಎಂದು ಹೇಳುತ್ತಾರೆ.

ನಾನು ಫಿರ್ಯಾದಿ ಅಥವಾ ಅವನ ಅಣ್ಣನ ವಿರುದ್ದ ಅವರು ತನಗೆ ತೊಂದರೆ ಕೊಡುತ್ತಿದ್ದ ಬಗ್ಗೆ ನಾನು ವ್ಯಾಪ್ತಿ ಹೊಂದಿದ ಪೊಲೀಸರಿಗೆ ದೂರು ನೀಡಿಲ್ಲ. ಫಿರ್ಯಾದಿ ಮತ್ತು ಅವನ ಅಣ್ಣನ ವಿರುದ್ದ ಅವರು ತೊಂದರೆ ನೀಡುತ್ತಿದಲ್ಲಿ ದೂರು ಕೊಡಲು ಆಕ್ಷೇಪ ಏನೂ ಇರಲಿಲ್ಲ ಎಂದರೆ ಸರಿ. ಪ್ರಸ್ತುತ ಪ್ರಕರಣದ ಸಮನ್ಸ ಜಾರಿಯಾದ ನಂತರ ನಾನು ಫಿರ್ಯಾದಿಯ ವಿರುದ್ದ ಯಾವುದೇ ಪ್ರಕರಣ ದಾಖಲಿಸಿಲ್ಲ ಮತ್ತು ದೂರು ನೀಡಿಲ್ಲ. ಫಿರ್ಯಾದಿಯ ಅಣ್ಣನಿಗೆ ಮತ್ತು ಫಿರ್ಯಾದಿಯ

ಸಹೋದರಿಗೆ ನಾನು ಭೇಟಿಯಾಗದೆಯಿದ್ದರೂ ಭೇಟಿಯಾಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2018 ರ ನವೆಂಬರ ಮಾಹೆಯ ಮೊದಲ ವಾರದಲ್ಲಿ ನನಗೆ ಹಣದ ಅವಶ್ಯಕತೆಯಿರುವ ಕಾರಣ ಫಿರ್ಯಾದಿಗೆ ಭೇಟಿಯಾಗಿ ನಾನು ಅವರಿಂದ ರೂ.5 ಲಕ್ಷ ಹಣ ಪಡೆದಿದ್ದೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಆರು ತಿಂಗಳ ಒಳಗೆ ತೀರಿಸುವುದಾಗಿ ಮತ್ತು ಸದರಿ ಸಾಲದ ತಿರುವಳಿಗಾಗಿ ನಿ.ಪಿ.1 ನ್ನು ಕೊಟ್ಟದ್ದೆ ಎಂದರೆ ಸರಿಯಲ್ಲ. ಫಿರ್ಯಾದಿಗೆ ನಾನು ಪಡೆದುಕೊಂಡ ಹಣವನ್ನು ಮರಳಿ ಕೊಡಬೇಕಾಗುತ್ತದೆ ಎನ್ನುವ ಕಾರಣಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣಕ್ಕೆ ಮತ್ತು ಫಿರ್ಯಾದಿಯ ಅಣ್ಣನ ಮೇಲಿರುವ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ, ಆದರೂ ಸಹ ಸದರಿ ಪ್ರಕರಣದ ಮಾಹಿತಿಗಳನ್ನು ಪ್ರಸ್ತುತ ಪ್ರಕರಣಕ್ಕೆ ಜೋಡಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ಕ್ಕೆ ನಾನೇ ಸಹಿ ಹಾಕಿ ಫಿರ್ಯಾದಿಗೆ ಕೊಟ್ಟು ಈಗ ಸಹಿ ಮಾಡಿಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.